2. ಕೊರತೆ ಇರುವ ಹೊಸ ವಸತಿ ಗೃಹಗಳನ್ನು ಕಟ್ಟಿಸಿ ಕೊಡುವ ಯೋಜನೆ ಸರ್ಕಾರದ ಮುಂದಿದೆಯೇ? ಕೊರತೆ ಇದ್ದಲ್ಲಿ ಯಾವಾಗ ಕ್ರಮ ಜರುಗಿಸಲಾಗುವುದು?

3. ಬೆಳ್ತಂಗಡಿ ತಾಲ್ಲೂಕಿನಲ್ಲಿರುವ ಅಗ್ನಿಶಾಮಕ ದಳದ ಕಛೇರಿಗೆ ಸ್ವಂತ ಕಟ್ಟಡವನ್ನು ಯಾವಾಗ ಕಟ್ಟಿಸಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :

1. ಬೆಳ್ತಂಗಡಿ ತಾಲ್ಲೂಕಿನಲ್ಲಿರುವ ಬೆಳ್ತಂಗಡಿ ಠಾಣೆಯ 1 ಪಿಎಸ್‌ಐ, 2 ಎಎಸ್‌ಐ, 1 ಹೆಚ್‌ಸಿ, 12 ಪಿಸಿ ಸಿಬ್ಬಂದಿಗಳಿಗೆ ಹಾಗೂ ವೇಣೂರು ಠಾಣೆಯ 2 ಹೆಚ್‌ಸಿ, 9 ಪಿಸಿ ಸಿಬ್ಬಂದಿಯವರಿಗೆ ವಸತಿ ಗೃಹಗಳನ್ನು ಕಲ್ಪಿಸಿಕೊಡಲಾಗಿದೆ.

2. ವಸತಿ ಗೃಹದ ಕೊರತೆಯಿರುವ ಬೆಳ್ತಂಗಡಿ ಠಾಣೆಯ 1 ಪಿ.ಐ., 8 ಹೆಚ್.ಸಿ, 19 ಪಿಸಿ ಗಳಿಗೆ ಹಾಗೂ ವೇಣೂರು ಠಾಣೆಯ 1 ಪಿಎಸ್‌ಐ, 2 ಎಎಸ್‌ಐ, 5 ಹೆಚ್‌ಸಿ ಹಾಗೂ 12 ಪಿಸಿ ಸಿಬ್ಬಂದಿಗಳಿಗೆ ವಸತಿ ಗೃಹಗಳನ್ನು ಕಲ್ಪಿಸಿಕೊಡುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

3. ಅಗ್ನಿಶಾಮಕ ಠಾಣೆಯ ಕಟ್ಟಡವನ್ನು ನಿರ್ಮಾಣ ಮಾಡಲು ಅಗತ್ಯವಾದ ಹಣಕಾಸು ಲಭ್ಯವಾದ ನಂತರ, ಈ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುವುದು.

ಬಿಜಾಪುರ ತಾಲ್ಲೂಕು ಅಂಕಲಗಿ ಇಂಗು ಕೆರೆ ಯೋಜನೆ

3282 - ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ (ತಿಕೋಟ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ತಾಲ್ಲೂಕು ಅಂಕಲಗಿ ಇಂಗು ಕೆರೆ ಯೋಜನೆಗೆ ಎಂದು ಮಂಜೂರಾತಿ ನೀಡಲಾಗಿದೆ?

ಆ) ಈ ಕಾಮಗಾರಿಗೆ ಮಂಜೂರಾದ ಒಟ್ಟು ಹಣ ಎಷ್ಟು?

ಇ) ಈ ಯೋಜನೆ ಈಗ ಯಾವ ಹಂತದಲ್ಲಿದೆ?

ಈ) ಈ ಯೋಜನೆಯ ಕಾಮಗಾರಿಯನ್ನು ಪೂರ್ಣಗೊಳಿಸಲಿಕ್ಕೆ ಇನ್ನೂ ಬೇಕಾಗುವ ಕಾಲಾವಕಾಶ ಎಷ್ಟು?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ) ಜನವರಿ 1999ರಲ್ಲಿ ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ನೀಡಲಾಗಿದೆ.

ಆ) ರೂ. 29.60 ಲಕ್ಷ.

ಇ) ಈ ಯೋಜನೆಯ ಕಾಮಗಾರಿ ಕೈಗೊಳ್ಳಲು ಗುತ್ತಿಗೆದಾರರನ್ನು ನೇಮಿಸಲಾಗಿದ್ದು,

ಭೂಸ್ವಾಧೀನ ಪ್ರಕ್ರಿಯೆ ಮುಗಿಯದ ಪ್ರಯುಕ್ತ ಹಾಗೂ ಸಂಬಂಧಪಟ್ಟ ರೈತರು ನ್ಯಾಯಾಲಯದಿಂದ ತಾತ್ಕಾಲಿಕ ತಡೆಯಾಜ್ಞೆ ತಂದಿರುವುದರಿಂದ ಸಧ್ಯದಲ್ಲಿ ಕೆಲಸವು ಸ್ಥಗಿತಗೊಂಡಿರುತ್ತದೆ.

ಈ) ನ್ಯಾಯಾಲಯದ ತಡೆಯಾಜ್ಞೆಯನ್ನು ತೆರವುಗೊಳಿಸಿಕೊಂಡು ಭೂಸ್ವಾಧೀನ ಪ್ರಕ್ರಿಯೆಯನ್ನು ಆದಷ್ಟು ಬೇಗ ಪೂರ್ಣಗೊಳಿಸಿ ಕೆಲಸವನ್ನು ಶೀಘ್ರಪೂರ್ಣಗೊಳಿಸಲಾಗುವುದು.

ಬಿಜಾಪುರ ತಾಲ್ಲೂಕು ಕನಮಡಿ ಗ್ರಾಮಕ್ಕೆ (ಧರೀ ದೇವರಹಳ್ಳಕ್ಕೆ) ಬಾಂಈಓರ ನಿರ್ಮಾಣ

3284 - ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ (ತಿಕೋಟ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬಿಜಾಪುರ ತಾಲ್ಲೂಕು ಕನಮಡಿ ಗ್ರಾಮ ಧರಿದೇವರಹಳ್ಳಕ್ಕೆ ಬಾಂಧಾರ ನಿರ್ಮಾಣದ ಯೋಜನೆಗೆ ಎಂದು ಮಂಜೂರಾತಿ ನೀಡಲಾಗಿದೆ?*

ಆ) *ಈ ಯೋಜನೆಗೆ ಮಂಜೂರು ಮಾಡಿದ ಹಣ ಎಷ್ಟು? ಮತ್ತು ಬಿಡುಗಡೆ ಮಾಡಿದ ಹಣ ಎಷ್ಟು?*

ಇ) *ಈ ಯೋಜನೆಯು ಈಗ ಯಾವ ಹಂತದಲ್ಲಿದೆ? ಹಾಗೂ ಈ ಯೋಜನೆಯು ಪೂರ್ಣಗೊಳ್ಳಲಿಕ್ಕೆ ಬೇಕಾಗುವ ಕಾಲಾವಧಿ ಎಷ್ಟು?*

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಮಂಜೂರಾತಿ ನೀಡಿರುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಈ ಯೋಜನೆಯ ಅಂದಾಜು ಪತ್ರಿಕೆ ಹಾಗೂ ನಕ್ಷೆ ತಯಾರಿಸಿ, ಟಿ.ಎ.ಸಿ.ಗೆ ಸಲ್ಲಿಸಲಾಗಿದ್ದು, ಟಿ.ಎ.ಸಿ. ಹಲವು ಆಕ್ಷೇಪಣೆಗಳನ್ನು ತೆಗೆದುಕೊಂಡಿದೆ. ಆಕ್ಷೇಪಣೆಗಳಿಗೆ ಅನುಸರಣಾ ವರದಿಯನ್ನು ಸಲ್ಲಿಸಲಾಗಿದೆ. ಅನುಸರಣಾ ವರದಿಯ ಮೇಲೆ ಟಿ.ಎ.ಸಿ.ಯ ನಿರ್ಧಾರದ ನಂತರ ಯೋಜನೆ ಒಪ್ಪಿಗೆಯಾದಲ್ಲಿ, ತಾಂತ್ರಿಕ ಮಂಜೂರಾತಿ ಪಡೆದು ಕೆಲಸ ಪ್ರಾರಂಭಿಸಲು ಕ್ರಮ ಜರುಗಿಸಲಾಗುವುದು.

ಬಿಜಾಪುರ ತಾಲ್ಲೂಕ ಬಿಜ್ಜರಗಿ ಕೆರೆ

3285 - ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ (ತಿಕೋಟ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬಿಜಾಪುರ ತಾಲ್ಲೂಕು ಬಿಜ್ಜರಗಿ ಕೆರೆಯ ನಿರ್ಮಾಣಕ್ಕೆ 4 (1) ಹೊರಡಿಸಲಾಗಿದೆಯೇ?*

ಆ) *ಹಾಗಿದ್ದಲ್ಲಿ ಸರ್ಕಾರವು ಇದರ ಬಗ್ಗೆ ಕೈಗೊಂಡ ಕ್ರಮಗಳೇನು?*

ಇ) *ಕೆರೆಯನ್ನು ಎಂದು ಪೂರ್ಣಗೊಳಿಸಲಾಗುವುದು?*